ದಿನಾಂಕ: 24.09.2012

# ಟಿಪ್ಪಣಿ

ತಮಗೆಲ್ಲರಿಗೂ ತಿಳಿದಿರುವಂತೆ ಕಳೆದ ತಿಂಗಳು ನಾವು ಕಸ ವಿಲೇವಾರಿ ಬಗ್ಗೆ ಬಹಳಷ್ಟು ಕಠಿಣ ಸ್ಥಿತಿಯನ್ನು ಪ್ರಾಥಮಿಕವಾಗಿ ತ್ಯಾಜ್ಯ ವಿಲೇವಾರಿ ಮಾಡುವ ಸ್ಥಳವನ್ನು ಹತ್ತಿರದ ಹಳ್ಳಿ ನಿವಾಸಿಗಳು ಮುಚ್ಚಲ್ಪಟ್ಟಿದ್ದರಿಂದ ಬಹಳಷ್ಟು ತೊಂದರೆ ಉಂಟಾಯಿತು. ಸನ್ಮಾನ್ಯ ಮುಖ್ಯಮಂತ್ರಿಯವರ ಮಧ್ಯಸ್ತಿಕೆಯಿಂದ ಮಂಡೂರು ಹಳ್ಳಿಯ ನಿವಾಸಿಗಳು ಬೃ.ಬೆಂ.ಮ.ಪಾಲಿಕೆಯವರು ತ್ಯಾಜವನ್ನು 30.9.2012ರ ವರೆಗೆ ವಿಲೇವಾರಿ ಮಾಡಲು ಒಪ್ಪಿರುತ್ತಾರೆ. ನಿಮ್ಮ ಕಾರ್ಯಶೀಲತೆಯ ಸಹಕಾರ ಮತ್ತು ಪೂರ್ಣಪ್ರಮಾಣದ ಕ್ಷೇತ್ರಾಧಿಕಾರಿಗಳ ಒಳಗೊಳ್ಳುವಿಕೆಯಿಂದ ಈವರೆಗೆ ಘನತ್ಯಾಜ್ಯ ವಿಲೇವಾರಿಯ ಸ್ಥಿತಿಯನ್ನು ನಿರ್ವಹಿಸಲು ಯಶಸ್ವಿಯಾಗಿರುತ್ತೇವೆ.

2. ನೀವೆಲ್ಲರೂ ಮೇಲಿನ ವ್ಯವಸ್ಥೆಯನ್ನು ಶ್ಲಾಘಿಸುತ್ತೀರಿ. ಆದರೆ, ಈ ವ್ಯವಸ್ಥೆಯು ತಾತ್ಕಲಿಕ ವ್ಯವಸ್ಥೆಯಾಗಿದ್ದು ತ್ಯಾಜ್ಯವನ್ನು ಬೇರ್ಪಡಿಸುವ ದೀರ್ಘಾವಧಿಯ ಪರಿಹಾರವನ್ನು ಕಂಡುಹಿಡಿಯ ಬೇಕಾಗಿರುತ್ತದೆ. ಇದರಿಂದ ಮಿಶ್ರಣ, ಹಸಿತ್ಯಾಜ್ಯ ಹಾಗೂ ಬೈಯೊಗ್ಯಾಸ್ ಹಾಗೂ ಒಣತ್ಯಾಜ್ಯವನ್ನು ನೇರವಾಗಿ ಪುನರ್ ಬಳಸಸುವುದಲ್ಲದೆ ಮಾರಾಟ ಮಾಡಬಹುದಾಗಿದೆ ಹಾಗೂ ಉಳಿದ ಶೇ.10 ರಷ್ಟು ಕಸ ಎಸೆಯುವ ಸ್ಥಳದಲ್ಲಿ ಉಳಿಯುತ್ತದೆ.

3. ಮೇಲಿನ ದಿಸೆಯಲ್ಲಿ ಈಗಾಗಲೇ ತೆಗೆದುಕೊಂಡ ಕ್ರಮಗಳ ಪಟ್ಟಿಯನ್ನು ನೀಡುತ್ತ ಹಾಗೂ ಮುಂದಿನ ದಿನಗಳಲ್ಲಿ ನೀವು ಹಾಗೂ ನಿಮ್ಮ ತಂಡದವರು ತೆಗೆದುಕೊಳ್ಳಬೇಕಾಗಿರುವ ಮುಂದಿನ ಕ್ರಮಗಳು ಈ ಕೆಳಗಿನಂತಿರುತ್ತವೆ:

3.1 <u>ತ್ಯಾಜ್ಯವನ್ನು ಬೇರ್ಪಡಿಸುವ ಬಗ್ಗೆ ಸಾರ್ವಜನಿಕರ ತಿಳುವಳಿಕೆ:</u> ಈ ಬಗ್ಗೆ ಈಗಾಗಲೇ ದಿ.15.9.2012 ಮತ್ತು 20.9.2012ರಂದು ಎರಡು ಸಾರ್ವಜನಿಕ ಪ್ರಕಟಣೆಯನ್ನು ಹಸಿತ್ಯಾಜ್ಯ, ಒಣತ್ಯಾಜ್ಯ, ಉದ್ಯಾನವನ ತ್ಯಾಜ್ಯ, ಕಟ್ಟಡದ ಭಗ್ನಾವಶೇಷಗಳು ಮತ್ತು ಅನುಪಯುಕ್ತ ತ್ಯಾಜ್ಯ, ನೈರ್ಮಲ್ಯ ತ್ಯಾಜ್ಯ ಹಾಗೂ ಗೃಹಬಳಕೆ ತ್ಯಾಜ್ಯವನ್ನು ಕಡ್ಡಾಯವಾಗಿ ವಿಂಗಡಣೆ ಮಾಡುವುದನ್ನು ಪಾಲಿಸುವ ಬಗ್ಗೆ ರೂಪುರೇಶೆಯನ್ನು ಸಂಕ್ಷಿಪ್ತವಾಗಿ ಸಾರ್ವಜನಿಕರಿಗೆ ಹಾಗೂ ಸಗಟು ಉತ್ಪಾದಕರಿಗೆ ತಿಳಿಸಲಾಗಿದೆ. ಮುಂದುವರೆದು, ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ:

ಅ) ಪ್ರಕಟಣೆಯ ಸಾರಾಂಶ ಹಾಗೂ ಆಗುಹೋಗುಗಳನ್ನು ನಿಮ್ಮ ತಂಡ ಹಾಗೂ ಎಲ್ಲ ಹೊರ ಮೂಲದಿಂದ ಪಡೆದ ಸಿಬ್ಬಂದಿ ಹಾಗೂ ಪೌರಕಾರ್ಮಿಕರನ್ನು ಒಳಗೊಂಡಂತೆ ತಿಳುವಳಿಕೆ ನೀಡುವುದು. ಶ್ರೀ. ಗಿರೀಶ್ ಕಾಸರವಳ್ಳಿಯವರು ನಿರ್ಮಿಸಿರುವ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲು ಕ್ರಮ ಕೈಗೊಳ್ಳುವುದು ಹಾಗೂ ಈ ದಿಶೆಯಲ್ಲಿ ಪ್ರದರ್ಶನ ವಸ್ತುಗಳನ್ನು ಉಪಯೋಗಿಸಿಕೊಳ್ಳವುದು.

ಆ) ಸಾರ್ವಜನಿಕ ಪ್ರಕಟಣೆಯ ಬಗ್ಗೆ ವ್ಯಾಪಕ ತಿಳುವಳಿಕೆಯನ್ನು ನಿಮ್ಮ ಎಲ್ಲಾ ವಲಯ ಮತ್ತು ವಾರ್ಡ್ ಮಟ್ಟಗಳಲ್ಲಿ ನೀಡುವುದು, ಈ ಬಗ್ಗೆ ಸಾರ್ವಜನಿಕರು ಪ್ರತಿನಿಧಿಗಳೊಂದಿಗೆ ಸಂಘಗಳು, ಗೃಹಣಿಯರು, ಸಾರ್ವಜನಿಕರು, ವ್ಯಾಪಾರ ಉತ್ಪಾಧಕರು, ಮಾಧ್ಯಮಗಳ ಮೂಲಕ ಬೇರ್ಪಡಿಸುವ ಬಗ್ಗೆ ಸಾರ್ವಜನಿಕ ತಿಳುವಳಿಕೆ ನೀಡಲು ಮತ್ತು ಪ್ರತ್ಯೇಕ ಮಾರ್ಗಗಳಲ್ಲಿ ಹಸಿತ್ಯಾಜ್ಯ, ಒಣ ತ್ಯಾಜ್ಯಗಳನ್ನು ಸಾಗಿಸುವ ವಿವರಗಳನ್ನು ತಿಳಸುವುದು. ಸಾರ್ವಜನಿಕರ ವಿಚಾರಣೆ, ಸಲಹೆಗಳು ಮತ್ತು ದೂರುಗಳನ್ನು ನೋಂದಾಯಿಸಲು ಪ್ರಮುಖವಾಗಿ ಸಹಾಯವಾಣಿ ದೂರವಾಣಿ ಸಂಖ್ಯೆ 22660000 ಯನ್ನು ಪ್ರದರ್ಶಿಸುವುದು.

ಇ) ಹಸಿ ತ್ಯಾಜ್ಯವನ್ನು ಸಂಗ್ರಹಿಸಲು (ಮತ್ತು ಸಾಧ್ಯವಾದಲ್ಲೆ ಗೊಬ್ಬರಕ್ಕಾಗಿ) ಪ್ರತಿಯೊಂದು ವಾರ್ಡಿನಲ್ಲಿ ಮೂರು ಸ್ಥಳವನ್ನು ಮತ್ತು ಒಣ ತ್ಯಾಜ್ಯವನ್ನು (ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರ) ಸಂಗ್ರಹಿಸಲು ಪ್ರತಿಯೊಂದು ವಾರ್ಡಿನಲ್ಲಿ ಒಂದು ಸ್ಥಳವನ್ನು ಗುರುತಿಸುವುದು. ಈಗಾಗಲೇ ಬಹಳಷ್ಟು ಮೊತ್ತವು ತಮಗೆ ಬಿಡುಗಡೆಯಾಗಿದ್ದು, ಆ ಹಣದಿಂದ ತಾವು ವೇದಿಕೆ ನಿರ್ಮಿಸಲು, ಹಸಿ ತ್ಯಾಜ್ಯಗಳಿಗೆ ಜೈವಿಕ ತೊಟ್ಟಿಗಳನ್ನು (ಬಯೋ ಬಿನ್) ಕೊಳ್ಳಲು ಮತ್ತು ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳಿಗಾಗಿ ಶೆಡ್‌ಗಳ ನಿರ್ಮಾಣಗಳನ್ನು ಕೈಗೊಳ್ಳಬಹುದು.

ಈ) ಹಸಿ ತ್ಯಾಜ್ಯ, ಪುನರ್ ಬಳಕೆಗೊಳ್ಳದ ಒಣ ತ್ಯಾಜ್ಯ ಮತ್ತು ನಿರ್ಮಾಣ ಭಗ್ನಾವಶೇಷಗಳು ಹಾಗೂ ಜಡ ತ್ಯಾಜ್ಯಗಳನ್ನು ಸುರಿಯಲು, ಪ್ರಧಾನ ಕಛೇರಿಯ ಸಲಹೆಯೊಂದಿಗೆ ತಮ್ಮ ವಲಯದಲ್ಲಿ ಅನುಪಯುಕ್ತ ಕ್ವಾರಿಗಳನ್ನು ಪ್ರಕಟಿಸುವುದು.

ಉ) ಎಲ್ಲಾ ರೀತಿಯ IEC ಕೌಶಲ್ಯತೆಯನ್ನು ಅಂದರೆ ಜಾಹಿರಾತು ಫಲಕ, ಭಿತ್ತಿಪತ್ರಗಳು, ಕರಪತ್ರಗಳು ಮತ್ತು ಮನೆ ಮನೆಗೆ ಜಾಗೃತಿ ಶಿಬಿರ, ಶಾಲಾ ಕಾಲೇಜು ಮತ್ತು ಸಂಸ್ಥೆಗಳನ್ನು ಸಂದರ್ಶಿಸುವ ಮೂಲಕ ತಮ್ಮ ವಲಯದಲ್ಲಿ ಇರುವ ಪ್ರತಿಯೊಬ್ಬ ನಾಗರೀಕರಿಗೂ ಈ ಸಂದೇಶವನ್ನು ತಲುಪಿಸಲು ತಮಗೆ ಬಿಡುಗಡೆಯಾದ ಅನುದಾನವನ್ನು ಬಳಸಿಕೊಂಡು ಕ್ರಮ ತೆಗೆದುಕೊಳ್ಳುವುದು. ಈ ನಿಟ್ಟಿನಲ್ಲಿನ ಯಶೋಗಾಥೆಗಳನ್ನು ಸಂಗ್ರಹಿಸಿ ವ್ಯಾಪಕ ಪ್ರಸರಣಕ್ಕಾಗಿ ಸಾರ್ವಜನಿಕ ಸಂಪರ್ಕಾಧಿಕಾರಿಗೆ ತಲುಪಿಸುವುದು.

3.2 **<u>ನ್ಯಾಯಾಲಯದ ಆದೇಶಗಳು</u>** : ತ್ಯಾಜ್ಯ ನಿರ್ವಹಣೆ ಬಗ್ಗೆ ಜನರಿಗೆ ವಿವರಿಸಿ ವಿಂಗಡಣೆಗೆ ಒತ್ತು ನೀಡಿ ಮಾನ್ಯ ಉಚ್ಛ ನ್ಯಾಯಾಲಯವು ಈಗಾಗಲೇ ಎರಡು ಮಧ್ಯಂತರ ಆದೇಶಗಳ್ನು ನೀಡಿರುತ್ತದೆ (ಪ್ರತಿಗಳನ್ನು ಅನುಬಂಧ – 2ರಲ್ಲಿ ಲಗತ್ತಿಸಲಾಗಿದೆ). ಮಾನ್ಯ ಉಚ್ಛ ನ್ಯಾಯಾಲಯದ ನಿರ್ದೇಶನಗಳನ್ನು ಸಂಪೂರ್ಣವಾಗಿ ಅರಿತುಕೊಳ್ಳುವುದು (ಮತ್ತು ತಮ್ಮ ತಂಡದ ಸದಸ್ಯರಿಗೂ ಸಹ ವಿವರಿಸಿ) ಮತ್ತು ತಮ್ಮ ಎಲ್ಲಾ ಕ್ರಮಗಳು ನಿರ್ದೇಶನಕ್ಕೆ ಅನುಗುಣವಾಗಿ ಇರುವುದನ್ನು ಖಚಿತಪಡಿಸಿಕೊಳ್ಳುವುದು.

3.3 <u>ಹೊಸ ಟೆಂಡರುಗಳು</u> : ರಾಜ್ಯ ಸರ್ಕಾರದ ಅನುಮತಿಯೊಂದಿಗೆ (ಪ್ರತಿ ಅನುಬಂಧ 3ರಲ್ಲಿ ಲಗತ್ತಿಸಿದೆ) ಬೃ.ಬೆಂ.ಮ.ಪಾಲಿಕೆಯು 89 ಪ್ಯಾಕೇಜುಗಳಿಗೆ ಹೊಸ ಟೆಂಡರುಗಳನ್ನು ಕರೆದಿದೆ. ಗುತ್ತಿಗೆದಾರರ ವ್ಯಾಪಕ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳಲು ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ:

ಅ) ಗುತ್ತಿಗೆಯಲ್ಲಿ ಸ್ಪರ್ಧಾತ್ಮಕ ಪಾಲ್ಗೊಳ್ಳುವಿಕೆಯನ್ನು ಉತ್ತಮಗೊಳಿಸಲು ಘನ ತ್ಯಾಜ್ಯ ನಿರ್ವಹಣಾ ಗುತ್ತಿಗೆದಾರರ (ಸುಮಾರು 60-90 ಸಂಖ್ಯೆಯಷ್ಟಿರುವ) ಜೊತೆಗೆ ಮೊದಲನೇ ದರ್ಜೆಯ ರಾಜ್ಯ ಲೋಕೋಪಯೋಗಿ ಇಲಾಖೆ / ಕೇಂದ್ರ ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರರಿಗೂ (5000ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿರುವ) ಸಹ ಅರ್ಹತೆಯ ಅವಕಾಶವನ್ನು ಪರಿಗಣಿಸಲಾಗಿದೆ.

ಆ) ಪಾಲ್ಗೊಳ್ಳುವಿಕೆಯನ್ನು ಉತ್ತಮಗೊಳಿಸುವುದನ್ನು ಖಚಿತಪಡಿಸಿಕೊಳ್ಳಲು ಬೇಕಾದ ಸಾಲ ಪಾವತಿ ಶಕ್ತಿಯನ್ನು (ಸಾಲ್ವೆನ್ಸಿ) ಸುಮಾರು ರೂ.1.50 ಕೋಟಿಗಳಿಂದ ರೂ.20-30 ಲಕ್ಷಗಳಿಗೆ ಇಳಿಸಲಾಗಿದೆ.

ಇ) ವಾಹನ / ಉಪಕರಣ ಇತ್ಯಾದಿಗಳ ಮುಂಗಡ ಪಟ್ಟಿ ನೀಡುವಿಕೆಯ ಅವಶ್ಯಕತೆಯನ್ನು ಗಮನಾರ್ಹವಾಗಿ ಸಡಿಲಿಸಲಾಗಿದೆ. ಅಂದರೆ ಹೊಸ ಗುತ್ತಿಗೆದಾರ ಎದುರು ಈಗಾಗಲೇ

ಸ್ಥಾಪಿತವಾಗಿರತಕ್ಕಂಥ ಗುತ್ತಿಗೆದಾರರು ಯಾವುದೇ ರೀತಿಯ ಅನ್ಯಾಯ ಅಥವಾ ಅನೀತಿಯ ಸೌಲಭ್ಯಗಳನ್ನು ಪಡೆಯದಂತೆ ಹಾಲಿ ಗುತ್ತಿಗೆದಾರರ ಏಕಸ್ವಾಮ್ಯತೆ ಮತ್ತು ನಾಯಕತ್ವವನ್ನು ತಡೆಯುವುದು.

ಈ) ಪೌರಕಾರ್ಮಿಕರಿಗೆ ಉತ್ತಮವಾದ ಕೆಲಸದ ವಾತಾವರಣ ಮತ್ತು ಕಾರ್ಯನಿರ್ವಹಣೆಯನ್ನು ಸುಧಾರಿಸಲು ಅನುಕೂಲವಾಗುವಂತ ಏಕರೂಪದ ಪೊರಕೆ, ಕೈಗವಸು ಇತ್ಯಾದಿಗಳನ್ನು ಒದಗಿಸಲು ಸಂಪೂರ್ಣ ವ್ಯವಸ್ಥೆ ಮಾಡುವುದು.

ಉ) ಎಲ್ಲೆಂದರಲ್ಲಿ ಕಸ ಎಸೆಯುವುದನ್ನು ತಡೆಯಲು – ರಸ್ತೆಯಲ್ಲಿ ಬಿದ್ದಿರುವ ತ್ಯಾಜ್ಯವನ್ನು ಎರಡು ಪಾಳಿಗಳಲ್ಲಿ ಸ್ವಚ್ಛಗೊಳಿಸುವ ಸಂಪೂರ್ಣ ಹೊಣೆಗಾರಿಕೆ.

ಜನರಿಂದ ವಿಂಗಡಣೆ, ಸಾರ್ವಜನಿಕರಿಗೆ ಉತ್ತಮ ಸೇವೆ, ಎಲ್ಲಾ ಪೌರಕಾರ್ಮಿಕರಿಗೆ ಸುರಕ್ಷತಾ ಕಿಟ್, ಸಾಗಾಣೆಗಾಗಿ ಹೊಸ ವಾಹನಗಳನ್ನು ಬಳಸುವುದು ಮತ್ತು ಒಟ್ಟು ಕಾರ್ಯಕ್ಷಮತೆ ಹಾಗೂ ತ್ಯಾಜ್ಯ ನಿರ್ವಹಣೆಯಲ್ಲಿ ಇಲ್ಲಿಯವರೆವಿಗೂ ಕಾಣೆಯಾಗಿರುವ ಸೌಂದರ್ಯಗುಣ ಕ್ಷೀಣಿಸಲು ಕಾರಣವಾದವರಿಗೆ ಅಧಿಕ ದಂಡ ವಿಧಿಸುವುದು ಮುಂತಾದವುಗಳ ಮೇಲೆ ಹೊಸ ಟೆಂಡರಿನಲ್ಲಿ ಹೆಚ್ಚಿನ ಒತ್ತು ನೀಡಲಾಗಿದೆ. ಹೊಸ ಟೆಂಡರಿನಲ್ಲಿ ಎಲ್ಲಾ ವಸ್ತುಗಳಿಗೆ / ಅಂಶಗಳಿಗೆ ವಾಸ್ತವಿಕ ದರಗಳನ್ನು ನೀಡಿರುವುದರಿಂದ ಗುತ್ತಿಗೆದಾರರು ದಸ್ತಾವೇಜುಗಳನ್ನು ತಿದ್ದುವುದು ಮತ್ತು ಅಧಿಕ ಮೊತ್ತಕ್ಕೆ ಇನ್ವಾಯ್ಸ್ ನೀಡುವುದಕ್ಕೆ ಅವಕಾಶವಿರುವುದಿಲ್ಲ. ವಲಯದ ಸಂಖ್ಯೆಯೊಂದಿಗೆ ವಾಹನಗಳಿಗೆ ಸಂಖ್ಯೆ, ಪ್ಯಾಕೇಜ್ ಸಂಖ್ಯೆ ಪ್ರಧಾನವಾಗಿ ಪ್ರದರ್ಶಿಸುವುದು ಮುಂತಾದ ಸುರಕ್ಷತಾ ರೂಪುರೇಶೆಗಳನ್ನು ಕೈಗೊಳ್ಳುವುದರಿಂದ ನಾಗರೀಕರಿಗೆ ತೃಪ್ತಿಕರ ಸೇವೆ ಖಚಿತಪಡಿಸಬಹುದಾಗಿದೆ.

ಪ್ರತಿ ವಾರ್ಡಿನಲ್ಲಿ ತೃಪ್ತಿದಾಯಕ, ಅವಶ್ಯಕತೆಗನುಗುಣವಾಗಿ ಹಾಗೂ ಎಲ್ಲಾ ಟೆಂಡರುಗಳು ಕ್ರಮಬದ್ಧವಾಗಿರುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ, ವಿವಿಧ ಮೂಲ ಅಂದಾಜುಗಳ ನಿಯಂತ್ರಿತ ಮಾನದಂಡ ಮತ್ತು ಪ್ರಸ್ತಾವಿತ ಕೆಲಸಗಳ ಪರಿಮಾಣಗಳನ್ನು ಅರಿತುಕೊಳ್ಳಲು ಕರೆ ನೀಡುವಂತೆ ತಮ್ಮನ್ನು ನಾನು ಕೇಳಿಕೊಳ್ಳುತ್ತೇನೆ. ಹೊಸ ಟೆಂಡರುಗಳ ಬಗ್ಗೆ ಉತ್ತಮ ತಿಳುವಳಿಕೆಗಾಗಿ ಸಾರ್ವಜನಿಕ ಪ್ರತಿನಿಧಿಗಳು, SEs/EEs ಗಳು, ತಜ್ಞರೊಂದಿಗೆ ತಾವು ಪರಸ್ಪರ ಚರ್ಚಿಸಿ ಮಾಹಿತಿ ಹೊರತೆಗೆಯಲು ಬಯಸಬಹುದು ಮತ್ತು ಸಲಹೆ/ ಮರುಮಾಹಿತಿಯನ್ನು ಶೀಘ್ರವಾಗಿ ೨೪.೦೯.೨೦೧೨ ರೊಳಗೆ ನೀಡಬಹುದು.

4. **ಗೊಬ್ಬರ ತಯಾರಿಕೆಗಾಗಿ ನಿವೇಶನಗಳ ಗುರುತಿಸುವಿಕೆ:** ಮಂಡೂರು ತ್ಯಾಜ್ಯ ಸುರಿಯುವ ಸ್ಥಳ ಮುಚ್ಚಿದ ನಂತರ, ೦೧.೧೦.೨೦೧೨ಕ್ಕೆ ಜಾರಿಗೆ ಬರುವಂತೆ ನಮಗೆ ಇರುವ ಒಂದೇ ಆಯ್ಕೆ ಎಂದರೆ ಹಸಿ ತ್ಯಾಜ್ಯವನ್ನು ಸಾಗಿಸಲು ತಯಾರಿಕೆಗಾಗಿ ಸ್ಥಳವನ್ನು ಗುರುತಿಸುವುದು (ನಗರದ ಒಳಗೆ ಅಥವಾ ಹೊರಗೆ). ಇದರ ಬಗ್ಗೆ ಆಸಕ್ತಿಯ ಅಭಿವ್ಯಕ್ತಿಯನ್ನು ನೀಡಲಾಗಿದೆ (ಪ್ರತಿ ಅನುಬಂಧ ೧೦ರಲ್ಲಿ ಲಗತ್ತಿಸಲಾಗಿದೆ) ಮತ್ತು ಹಲವು ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿದೆ. ಇವುಗಳಲ್ಲಿ ಒಂದು ಪ್ರಸ್ತಾವನೆಯನ್ನು ಬಿಬಿಎಂಪಿ ಸಮಿತಿಯು ಅನುಮೋದಿಸಿದೆ. ಈ ಅನುಮೋದಿಸಲಾದ ಪ್ರಸ್ತಾವನೆಯಲ್ಲಿ ಚಿಂತಾಮಣಿಯ ರೈತರ ಗುಂಪು ೧೦೦೦ ಮೆಟ್ರಿಕ್ ಟನ್‌ಗಳ ತ್ಯಾಜ್ಯವನ್ನು ಅನುಬಂಧ ೫ ರಲ್ಲಿ ಲಗತ್ತಿಸಲಾದ ನಿಯಮ ಮತ್ತು ಷರತ್ತುಗಳಿಗೆ ಅನುಗುಣವಾಗಿ ಗೊಬ್ಬರವನ್ನಾಗಿ ಪರಿವರ್ತಿಸಲಾಗುವುದು. ಗೊಬ್ಬರವನ್ನಾಗಿ ಪರಿವರ್ತಿಸುವ ಚಟುವಟಿಕೆಯನ್ನು ಪ್ರಾರಂಭಿಸಲು ಅನುಕೂಲವಾಗುವಂತೆ ನಿಮ್ಮ ಹತ್ತಿರದ ಸ್ಥಳಗಳಿಗೆ ವಿಸ್ತರಿಸಲು ಮತ್ತು ನಿಮ್ಮ ವಲಯದಿಂದ ಹಸಿ ತ್ಯಾಜ್ಯವನ್ನು ಆಸ್ಥಳಗಳಿಗೆ ಕಡಿಮೆ ವೆಚ್ಚದಲ್ಲಿ ಸಾಗಾಟ ಮಾಡಲು ಅನುಕೂಲವಾಗುವಂತೆ ಇಂತಹ ಪ್ರಸ್ತಾವನೆಗಳನ್ನು ಗುರುತಿಸಬೇಕೆಂದು ಕೋರುತ್ತೇನೆ.

5. **ಹಸಿ ತ್ಯಾಜ್ಯ ಮಿಶ್ರಗೊಬ್ಬರ:** ಬಯೋ ಫುಯೊಲ್ ಮಂಡಳಿಯ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹಾಲಿ ಅಧ್ಯಕ್ಷರಾದ ಶ್ರೀ ವಾಮನಾಚಾರ್ಯ, ಶ್ರೀಮತಿ ಆಲಮಿತ್ರ ಪಟೇಲ್ ಹಾಗೂ ಇತರ ತಜ್ಞರೊಡನೆ ಹಸಿತ್ಯಾಜ್ಯ ಬೆರಕೆಗಳಿಗೆ ಬಿಬಿಎಂಪಿಗೆ ಸೂಕ್ತವಾದ ವಿವಿಧ ತಂತ್ರಜ್ಞಾನಗಳ ಬಗ್ಗೆ ಯಂತ್ರೋಪಕರಣವನ್ನು ಸೂಚಿಸಲು ಕೋರಲಾಗಿದೆ. ಬಿಬಿಎಂಪಿಯು ಜೈವಿಕ ಇಂದನ ಮಂಡಳಿಯ ತಾಂತ್ರಿಕ ಬೆಂಬಳ ಒದಗಿಸುವ ಸಂಸ್ಥೆಗಳು ಹಾಗೂ ವ್ಯಾಪಕ ಉಪ್ಪಾದಕರ ಸಹಾಯ ಮತ್ತು ಅವಶ್ಯಕ ರುವ ಸಲಹೆ ಮತ್ತು ಅನುಮೋದಿಸಲು ಪರಿಣಿತಿ ಬಯಸಿದ್ದರೂ ಇವರ ಶಿಫಾರಸ್ಸನ್ನು ಕಾರ್ಯಗತ ಗೊಳಿಸಲು ಶೀಘ್ರವೇ ತಮಗೆ ಕಳುಹಿಸಲಾಗುವುದು.

6. **ಮರುಬಳಕೆದಾರರೊಂದಿಗೆ ಚರ್ಚೆ:** ಬೇರ್ಪಡಿಸಿದ ನಂತರ ಒಣ ತ್ಯಾಜ್ಯವನ್ನು ಬಹಳಷ್ಟು ಮಟ್ಟಿಗೆ ಪುನರ್ ಉಪಯೋಗಿಸಬಹುದು ಹಾಗೂ ಮಾರಾಟ ಮಾಡಬಹುದಾಗಿದೆ. ಈ ಬಗ್ಗೆ ಬಿಡ್ದರ್ಗಳಿಗೆ ಸಂಯೋಜಿಸಿದ ಟೆಂಡರ್ ಕಲಮ್ ಗಳಲ್ಲಿ ಗರಿಷ್ಟ ಮಟ್ಟದ ಒಣ ತ್ಯಾಜ್ಯವನ್ನು ವಿಲೇವಾರಿ ಮಾಡಿದ ನಂತರ ಸಾಗಿಸಲು ಅವಕಾಶ ಕಲ್ಪಿಸಲಾಗಿದೆ. ಈ ಬಗ್ಗೆ ಈ ಕೆಳಕಂಡ ಕ್ರಮಗಳನ್ನು ನೀವು ತೆಗೆದುಕೊಳ್ಳಬೇಕಿದೆ:

ಅ) ಸ್ಥಳೀಯ ಸಂಸ್ಥೆಗಳೊಂದಿಗೆ ಅವರ ಘಟಕಗಳಿಗೆ ಸೂಕ್ತ ಜಾಗವನ್ನು ನೀಡಲು ಹಾಗೂ ಅವರ ಘಟಕಗಳಿಗೆ ನೇರವಾಗಿ ಒಣ ತ್ಯಾಜ್ಯವನ್ನು ಸಾಗಿಸುವ ಬಗ್ಗೆ ಚರ್ಚಿಸುವುದು.

ಆ) ಕನಿಷ್ಠ ಒಂದು ಒಣ ತ್ಯಾಜ್ಯ ಸಂಗ್ರಹ ಕೇಂದ್ರವನ್ನು ಸ್ಥಾಪಿಸಿ ಬಾಕಿ ಉಳಿದ ಒಣ ತ್ಯಾಜ್ಯವನ್ನು ಅವರ ಕೇಂದ್ರಕ್ಕೆ ಸಾಗಣಿಸಲು ಚರ್ಚಿಸುವುದು. ಒಣ ತ್ಯಾಜ್ಯ ಸಂಸ್ಕರಣೆಗೆ ಅವಶ್ಯವಿರುವ ಬಾಯ್ಲರ್, ಪ್ಯಾಕರ್ ಮತ್ತು ಇತರೆ ಯಂತ್ರೋಪಕರಣಗಳನ್ನು ಕೊಟೇಶನ್ ಮೂಲಕ ಪಡೆಯುವುದು.

ಇ) ನಮ್ಮ ಅನುಮತಿ ಪಡೆದ ನಂತರ DWCC ಯನ್ನು ಉಸ್ತುವಾರಿ ಮಾಡಲು ಒಂದು NGO ಗುರುತಿಸಿ ಅವರೊಡನೆ ಒಡಂಬಡಿಕೆ ಮಾಡಿಕೊಳ್ಳುವುದು.

7. **<u>ಕಸ ನಿರ್ವಹಣೆಯಲ್ಲಿ ಮೊಬೈಲ್ ಆಡಳಿತ ಬಳಕೆ:</u>** ಎಲ್ಲಾ ಕೇತ್ರ ಕಾರ್ಯಕರ್ತರಿಗೆ, ಸರಿಯಾದ ಸಮಯದಲ್ಲಿ ಕಸ ವಿಲೇವಾರಿ ಕಾರ್ಯ ನಿರ್ವಹಿಸಲು ಸಹಾಯವಾಗಲು ಜಿಪಿಎಸ್ ಸಕ್ರಿಯವಿರುವ ಮೊಬೈಲ್ ಸೆಟ್ ಒದಗಿಸಲಾಗುವುದು. ದಕ್ಷಿಣವಲಯದ ನಾಲ್ಕು ವಾರ್ಡಗಳಲ್ಲಿ ಈಗಾಗಲೇ ನವೀನ ತಂತ್ರಜ್ಞಾನವನ್ನು ಅನುಷ್ಠಾನಕ್ಕೆ ತರಲಾಗಿದ್ದು ಪ್ರತಿಕ್ರಿಯೆ ಮತ್ತು ಒಮ್ಮೆ ಮೌಲ್ಯಮಾಪನ ಆಧರಿಸಿ ಸೂಕ್ತ ಪರಿವರ್ತನೆಯೊಂದಿಗೆ ತಂತ್ರಜ್ಞಾನವನ್ನು ಎಲ್ಲಾ ವಾರ್ಡಗಳಿಗೆ ವಿಸ್ತರಿಸಲಾಗುವುದು.

ಅಧಿಕ ಆಯುಕ್ತರು (ದಕ್ಷಿಣ) ಇವರ ಸಂಪರ್ಕದೊಂದಿಗೆ ನಿಮ್ಮ ಅಧಿಕಾರಿಗಳನ್ನು ಪ್ರತಿ ನಿಧಿಯಾಗಿ ಕಳುಹಿಸಿ ಈ ಕೇಂದ್ರಗಳಿಗೆ ಭೇಟಿನೀಡಲು ಸೂಚಿಸುವುದು ಮತ್ತು ಫಲಿತಾಂಶದ ಅನುಭವವನ್ನು ನಮಗೆ ತಿಳಿಸುವುದು.

8. ಈ ಎಲ್ಲಾ ಕಷ್ಟಗಳು ಬೆಂಗಳೂರಿಗೆ ಅವಶ್ಯವಾದ ಪರಿಸರ ಸ್ನೇಹಿ ಮತ್ತು ಸ್ವಯಂ ಸಮರ್ಥನೀಯ ಕಸ ನಿರ್ವಹಣೆ ಪರಿಹಾರವನ್ನು ಒದಗಿಸಲು ಒಂದು ಅದ್ಭುತ ಅವಕಾಶವೆಂದು ಒತ್ತಿ ಹೇಳುವ ಮೂಲಕ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ವಿಂಗಡಣೆ ಮತ್ತು ಸ್ಟೇಕ್ ಹೋಲ್ಡರುಗಳ ಪಾಲ್ಗೊಳ್ಳುವಿಕೆಯು ಪ್ರಮುಖ ಪದಗಳಾಗಿವೆ. ಆದುದರಿಂದ ದಯವಿಟ್ಟು ಈ ಇಡೀ ವಾರವನ್ನು ಪ್ರತ್ಯೇಕವಾಗಿ ನನ್ನ ಪತ್ರದಲ್ಲಿ ತಿಳಿಸಲಾದ ವಿವಿಧ ವಿಷಯಗಳ ಬಗ್ಗೆ ಮತ್ತು ಅವುಗಷು ಜನರನ್ನು ತಲುಪಲು ಹಾಗು ಅವರು ಸಕ್ರಿಯವಾಗಿ ಭಾಗವಹಿಸುವಂತೆ ಗಮನ ಕೇಂದ್ರೀಕರಿಸಬೇಕು.

9. ಏನಾದರೂ ಹೆಚ್ಚು ಕಡಿಮೆಯಾದಲ್ಲಿ ಇವುಗಳಿಗೆ ಅಂತಿಮವಾಗಿ ನಾವೇ ಜವಾಬ್ದಾರಿ ಮತ್ತು ಹೊಣೆ ಹೊರಬೇಕಾಗಿರುತ್ತದೆ ಯಾದುದರಿಂದ, ದಯವಿಟ್ಟು ನಿಮ್ಮ ಉನ್ನತ ಪ್ರಯತ್ನ ಅವಶ್ಯಕವಿರುತ್ತದೆ.

(ಡಾಃ ರಜನೀಶ್ ಗೋಯಲ್)
ಆಯುಕ್ತರು

ಗೆ,

ಎಲ್ಲಾ ಅಧಿಕ ಹಾಗೂ ಜಂಟಿ ಆಯುಕ್ತರುಗಳಿಗೆ

ಎಲ್ಲಾ ಮುಖ್ಯ ಹಾಗೂ ಕಾರ್ಯನಿರ್ವಾಹಕ ಅಭಿಯಂತರರುಗಳಿಗೆ